ಕೊಡಿಸುವಂತಹ ಯೋಜನೆ. ಅದು ನಮ್ಮ ಜೀವಮಾನದಲ್ಲಿಯೇ ಬಹಳ ದೊಡ್ಡ ಸಾಧನೆ. ಆದರೆ ಆ ಯೋಜನಾ ವರದಿಯನ್ನು ತರಿಸುವುದಕ್ಕೆ ತಪ್ಪಿತಸ್ಥ ಅಧಿಕಾರಿಗಳು ಯಾರು ಇದ್ದಾರೆ ಅವರ ಬಗ್ಗೆ ತಾವು ಏಕೆ ಕ್ರಮ ಕೈಗೊಳ್ಳಬಾರದು? ಅದಕ್ಕೆ ಯಾರು ಹೊಣೆಗಾರರರು? ಅದನ್ನು ದಯವಿಟ್ಟು ತಿಳಿಸಿ.

ಶ್ರೀ ಬಸವರಾಜ್:- ಒಂದು ಮನೆಗೆ 25 ಸಾವಿರ ರೂಪಾಯಿ ಕೊಟ್ಟರೆ ಬಹಳ ಅನುಕೂಲ ಎಂದು ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು:- ಈಗ 20 ಸಾವಿರ ಕೊಟ್ಟಿದ್ದಾರೆ, ಇನ್ನು ಐದು ಸಾವಿರ ಕೇಳುತ್ತಿದ್ದೀರಿ.

ಅಧ್ಯಕ್ಷರು:- ಶಿವರಾಮೇಗೌಡರ ಪ್ರಶ್ನೆಯನ್ನು ತಡೆಹಿಡಿದಿದ್ದೇನೆ. ಅವರು ರಿಕ್ವೆಸ್ಟ್ ಮಾಡಿಕೊಂಡಿದ್ದಾರೆ.

2. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೇ, 19ನೇ ಜುಲೈ 1996ರ 11ನೇಯ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 58 ಪ್ರಶ್ನೆಗಳ ಪೈಕಿ 50 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ವಿಷಯ:- ಹುಬ್ಬಳ್ಳಿಗೆ ತಹಶೀಲ್ದಾರರ ನೇಮಕ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 537 (900)

ಶ್ರೀ ಅಶೋಕ ಕಾಟವೆ (ಹುಬ್ಬಳ್ಳಿ ಶಹರ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಹುಬ್ಬಳ್ಳಿಗೆ 3 ಜನ ತಹಶೀಲ್ದಾರ್‌ರನ್ನು ನೇಮಿಸಲು ಸರ್ಕಾರದವರಿಗೆ ಮನವಿ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿಸುವ ಕ್ರಮಗಳೇನು?

ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು):-

ಅ) ಬಂದಿಲ್ಲ.

ಆ) ಉದ್ಭವಿಸುವುದಿಲ್ಲ.

ವಿಷಯ:- ಧಾರವಾಡ ಜಿಲ್ಲೆಯ ಐ.ಸಿ.ಡಿ.ಎಸ್. ಯೋಜನೆಯಿಂದ ಆಹಾರ ಸರಬರಾಜು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 539 (899 ಎ)

ಶ್ರೀ ಅಶೋಕ ಕಾಟವೆ (ಹುಬ್ಬಳ್ಳಿ ನಗರ):- ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) 1994-95 ಹಾಗೂ 1995-96ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ಐ.ಸಿ.ಡಿ.ಎಸ್. ಯೋಜನೆಯಲ್ಲಿ ಆಹಾರ ಸರಬರಾಜು ಮಾಡುತ್ತಿದ್ದ ಗುತ್ತಿಗೆದಾರರ ಒಟ್ಟು ಸಂಖ್ಯೆ ಎಷ್ಟು?

ಆ) ಗುತ್ತಿಗೆಯ ನಿಬಂಧನೆಗಳೇನು? ಹಾಗೂ ಇವರು ಎಷ್ಟು ಮಕ್ಕಳಿಗೆ ಆಹಾರ ಸರಬರಾಜು ಮಾಡಿರುತ್ತಾರೆ, ಇದಕ್ಕಾಗಿ ವೆಚ್ಚವಾದ ಮೊತ್ತವೆಷ್ಟು?

ಶ್ರೀಮತಿ ವಿಮಲಬಾಯಿ ಜಗದೇವ್‌ರಾವ್ ದೇಶ್‌ಮುಖ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು):-

ಅ) 94-95ರಲ್ಲಿ 9 ಹಾಗೂ 1995-96ನೇ ಸಾಲಿನಲ್ಲಿ 11 ಸೊಸೈಟಿ: ಸಂಸ್ಥೆಗಳು ಐ.ಸಿ.ಡಿ.ಎಸ್. ಯೋಜನೆಯಲ್ಲಿ ಧಾರವಾಡ ಜಿಲ್ಲೆಗಳ ಅಂಗನವಾಡಿ ಕೇಂದ್ರಗಳಿಗೆ ಆಹಾರ ಸರಬರಾಜು ಮಾಡಿರುತ್ತವೆ.

ಆ) ಜಿಲ್ಲಾ ಪಂಚಾಯತಿ, ಧಾರವಾಡ ಇವರು ಹೊರಡಿಸಿರುವ ದಿನಾಂಕ 23-3-94 ಮತ್ತು 27-4-95ರ ಆದೇಶಗಳ ಪ್ರಕಾರ ಗುತ್ತಿಗೆಯ ನಿಬಂಧನೆಗಳು ಕೆಳಕಂಡಂತಿವೆ:

1. ಆಹಾರ ಸಾಮಗ್ರಿಗಳನ್ನು ಸಾಲದ ಮೇಲೆ ಸರಬರಾಜು ಮಾಡಲು ಒಪ್ಪಿಗೆ ನೀಡಬೇಕು.

2. ಆಹಾರ ಸಾಮಗ್ರಿಗಳನ್ನು ತಿಂಗಳಿಗೊಮ್ಮೆ ಪೂರೈಸಬೇಕು.

3. ಆಹಾರ ಸಾಮಗ್ರಿಗಳನ್ನು ಯೋಜನಾಧಿಕಾರಿಗಳ ಕಛೇರಿಗೆ : ಉಗ್ರಾಣಕ್ಕೆ ಸಾಗಾಣಿಕೆ ವೆಚ್ಚವಿಲ್ಲದೆ ಸರಬರಾಜು ಮಾಡಬೇಕು.

4. ಆಹಾರ ಸಾಮಗ್ರಿಗಳನ್ನು ಯೋಜನಾಧಿಕಾರಿಗಳ ಅಗತ್ಯಕ್ಕೆ ಅನುಗುಣವಾಗಿ ಸಕಾಲದಲ್ಲಿ ಸರಬರಾಜು ಮಾಡಬೇಕು.

5. ಸರ್ಕಾರದ ಹಾಗೂ ಜಿಲ್ಲಾ ಪಂಚಾಯತ್‌ನವರು ಕಾಲಕಾಲಕ್ಕೆ ವಿಧಿಸುವ ನಿಬಂಧನೆಗಳಿಗೆ ಒಳಪಟ್ಟಿರಬೇಕು.

6. ಆಹಾರದ ದರಗಳ ಬಗ್ಗೆ ಸಂಬಂಧಪಟ್ಟ ಸಹಕಾರಿ ಸಂಘಗಳ ಸಹಾಯಕ ನಿಬಂಧಕರಿಂದ ಪ್ರಮಾಣೀಕರಿಸಬೇಕು, ಸರಬರಾಜು ಮಾಡಿದ ಆಹಾರ ಪದಾರ್ಥಗಳ ಮಾದರಿಯನ್ನು ಸಹಾಯಕ ನಿಬಂಧಕರಿಗೆ ದೃಢೀಕರಣಕ್ಕಾಗಿ ನೀಡಬೇಕು. (ಈ ನಿಬಂಧನೆ ಎನ್‌ಸಿಸಿಎಫ್ ಮತ್ತು ಕೆಸಿಸಿಎಫ್‌ನವರಿಗೆ ಅನ್ವಯಿಸುವುದಿಲ್ಲ).

7. ಸರಬರಾಜಾದ ಪದಾರ್ಥಗಳ ಸರಿಯಾದ ಗುಣಮಟ್ಟವನ್ನು ಸ್ಪಷ್ಟವಾಗಿ

ಪ್ರತಿಯೊಂದು ಬಿಲ್ಲಿನಲ್ಲಿ ನಮೂದಿಸಬೇಕು.

8. ವೇಳೆಗೆ ಸರಿಯಾಗಿ ಇಲ್ಲದೆ ಒಳ್ಳೆಯ ಗುಣಮಟ್ಟವಿಲ್ಲದ ಹಾಗೂ ಅತೃಪ್ತಿಕರವಾಗಿ ಸರಬರಾಜು ಮಾಡಿದ್ದು ಕಂಡುಬಂದರೆ ಸದರಿ ಆದೇಶವನ್ನು ರದ್ದುಗೊಳಿಸಲಾಗುವುದು.

9. ಸರ್ಕಾರಿ ಆದೇಶದಲ್ಲಿಯ ಷರತ್ತುಗಳ ಪ್ರಕಾರ ಸಾಮಗ್ರಿಗಳನ್ನು ಸರಬರಾಜು ಮಾಡಬೇಕು.

1994-95ನೇ ಸಾಲಿನಲ್ಲಿ ಈ ಸೊಸೈಟಿ:ಸಂಸ್ಥೆಗಳು ಒಟ್ಟು 2,19,595 ಫಲಾನುಭವಿಗಳಿಗೆ ಆಹಾರ ಸರಬರಾಜು ಮಾಡಿದ್ದು ಇದರಲ್ಲಿ 1,85,966 ಮಕ್ಕಳಿರುತ್ತಾರೆ. ಇದಕ್ಕಾಗಿ ರೂ. 177.16 ಲಕ್ಷಗಳು ಖರ್ಚಾಗಿರುತ್ತವೆ.

1995-96ನೇ ಸಾಲಿನಲ್ಲಿ ಈ ಸೊಸೈಟಿ:ಸಂಸ್ಥೆಗಳು 2,46,109 ಫಲಾನುಭವಿಗಳಿಗೆ ಆಹಾರ ಸರಬರಾಜು ಮಾಡಿದ್ದು, ಇದರಲ್ಲಿ 2,07,087 ಮಕ್ಕಳು ಇರುತ್ತಾರೆ. ಇದಕ್ಕಾಗಿ ರೂ.296.67 ಲಕ್ಷಗಳು ಖರ್ಚಾಗಿರುತ್ತವೆ.

ವಿಷಯ:- ರಾಜ್ಯದಲ್ಲಿರುವ ತೋಟಗಾರಿಕೆ ಕೇಂದ್ರಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 541 (322)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು):- ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯಾದ್ಯಂತ ಇರುವ ತೋಟಗಾರಿಕೆ ಕ್ಷೇತ್ರಗಳು ಯಾವುದು?

ಆ) 1995-96ನೇ ಸಾಲಿಗೆ ಅವುಗಳಿಂದ ಬಂದ ಆದಾಯವೆಷ್ಟು? (ಪ್ರತಿಯೊಂದು ಕೇಂದ್ರವಾರು)

ಇ) 1995-96ನೇ ಸಾಲಿನ ಪ್ರತಿಯೊಂದು ಕೇಂದ್ರವಾರು ನಿರ್ವಹಣೆಗೆ ಆದ ಖರ್ಚು ಎಷ್ಟು? (ವಿವರವಾದ ಮಾಹಿತಿಯನ್ನು ಒದಗಿಸುವುದು)

ಶ್ರೀ ಡಿ.ಟಿ.ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು):-

ಅ) ರಾಜ್ಯದಾದ್ಯಂತ ತೋಟಗಾರಿಕೆ ಇಲಾಖೆಯ ವಶದಲ್ಲಿ ಇರುವ ಒಟ್ಟು 415 ತೋಟಗಾರಿಕೆ ಕೇಂದ್ರಗಳ (ಕ್ಷೇತ್ರಗಳ : ಸಸ್ಯಾಗಾರಗಳ) ಪಟ್ಟಿಯನ್ನು ಅನುಬಂಧ-1ರಲ್ಲಿ ಲಗತ್ತಿಸಲಾಗಿದೆ.

ಆ) 1995-96ನೇ ಸಾಲಿಗೆ ಈ ಕ್ಷೇತ್ರ : ಸಸ್ಯಾಗಾರಗಳಿಂದ ಒಟ್ಟಾರೆ ರೂ.4,25,45,865.00ಗಳು ಆದಾಯ ಬಂದಿರುತ್ತದೆ. (ಪ್ರತಿ ಕೇಂದ್ರದಿಂದ ಬಂದ ಆದಾಯದ ವಿವರಗಳನ್ನು ಅನುಬಂಧ 11ರಲ್ಲಿ ಲಗತ್ತಿಸಲಾಗಿದೆ)